1. ಕೊಳ್ಳೇಗಾಲ ತಾಲ್ಲೂಕಿನ ಹನೂರಿನ ಕಿರಿಯ ಕಾಲೇಜಿನಲ್ಲಿ ದ್ವಿತೀಯ ಪಿ ಯು.ಸಿ.ಯ ಪರೀಕ್ಷೆಯಲ್ಲಿ ಬರೆದಿರುವ 7 ಜನ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿದಿರುವ ಬಗ್ಗೆ

ಶ್ರೀ ಜಿ, ರಾಜುಗೌಡ (ಹನೂರು).—ಮಾನ್ಯ ಅಧ್ಯಕ್ಷರೇ ಕೊಳ್ಳೇಗಾಲ ತಾಲ್ಲೂಕಿನ ಹನೂರಿನ ಕಿರಿಯ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ.ಯ ಪರೀಕ್ಷೆಯಲ್ಲಿ ಬರೆದಿರುವ ೭ ಜನ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆ ಹಿಡಿದಿರುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ (ಮಾನ್ಯ ಉನ್ನತ ಶಿಕ್ಷಣ ಖಾತೆಯ ಮಂತ್ರಿಗಳು) — ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕಿನ ಹನೂರು ಕಿರಿಯ ಕಾಲೇಜಿನಲ್ಲಿ ಕಳೆದ ದ್ವಿತೀಯ ಪಿ ಯು.ಸಿ. ಪರೀಕ್ಷೆಯಲ್ಲಿ ಬರೆದಿರುವ ೭ ಜನ ವಿದ್ಯಾರ್ಥಿಗಳ ಫಲಿತಾಂಶವನ್ನು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅವ್ಯವಹಾರದಲ್ಲಿ ತೊಡಗಿದ್ದರಿಂದ ಫಲಿತಾಂಶವನ್ನು ತಡಿಹಿಡಿಯಲಾಗಿದೆ, ಅಲ್ಲದೆ ಉತ್ತರ ಪತ್ರಿಕೆಗಳಲ್ಲಿ ಕೊಠಡಿ ಮೇಲ್ವಿಚಾರಕರ ಸಹಿ ಇರುವುದಿಲ್ಲ. ಹಾಗೂ ಒಂದು ಉತ್ತರ ಪತ್ರಿಕೆಗಳಲ್ಲಿ ಬೇರೆ ಒಂದು ಹಾಳೆಯನ್ನು ಸೇರಿಸಿರುವುದು ಕಂಡು ಬಂದಿದೆ, ಈ ಕಾರಣದಿಂದ ಈ ವಿದ್ಯಾರ್ಥಿಗಳ ಬಗ್ಗೆ ಪೂರ್ಣ ವಿಚಾರಣೆ ನಡೆಸಿ ಫಲಿತಾಂಶವನ್ನು ನಿರ್ಣಯಿಸಲಾಗುವುದು.

ಶ್ರೀ ಜಿ. ರಾಜುಗೌಡ,—ಹನೂರಿನ ಪರೀಕ್ಷಾ ಕೇಂದ್ರದಲ್ಲಿ ೭ ಜನ ವಿದ್ಯಾರ್ಥಿಗಳು ಅವ್ಯವಹಾರ ನಡೆಸಿದ್ದಾರೆಂದು ತಮಗೆ ಏನಾದರೂ ದೂರು ಬಂದಿದೆಯೇ ? ಮೌಲ್ಯಮಾಪನ ಮಾಡುವವರು ವಿದ್ಯಾರ್ಥಿಗಳು ಬರೆದಿರುವ ಉತ್ತರಕ್ಕೆ ತಕ್ಕಂತೆ ಅಂಕಗಳನ್ನು ಕೊಡುವುದಕ್ಕೆ ಕಾನೂನು ಇದೆಯೆ ? ಒಬ್ಬನೇ ಉಪಾಧ್ಯಾಯನ ಮನೆಗೆ ಪಾಠಕ್ಕೆ ಹೋದಂಥ ಎಲ್ಲ ವಿದ್ಯಾರ್ಥಿಗಳೂ ಸಾಮಾನ್ಯವಾಗಿ ಒಂದೇ ರೀತಿ ಉತ್ತರವನ್ನು ಬರೆದಿರುತ್ತಾರೆ. ಆದನ್ನೇ ಆಧಾರವಾಗಿಟ್ಟುಕೊಂಡು ಎಲ್ಲ ಉತ್ತರಗಳೂ ಒಂದೇ ರೀತಿ ಇವೆ, ಇದ್ದರಿಂದ ಈ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಅವ್ಯವಹಾರ ಮಾಡಿದ್ದಾರೆ, ಕಾಪಿ ಮಾಡಿದ್ದಾರೆಂದು ತೀರ್ಮಾನಕ್ಕೆ ಬರುವುದು ಸರಿಯೇ ? ಯಾವುದೇ ಕೇಂದ್ರದಲ್ಲಾಗಲಿ, ಯಾರೇ ವಿದ್ಯಾರ್ಥಿಗಳಾಗಲಿ ಅವ್ಯವಹಾರ ಮಾಡುತ್ತಿದ್ದಾರೆ, ಕಾಪಿ ಮಾಡುತ್ತಿದ್ದಾರೆಂದು ತಿಳಿದುಬಂದ ಕೂಡಲೇ ಅವರನ್ನು ರೆಡ್ ಹ್ಯಾಂಡ್ ಆಗಿ ಹಿಡಿದು ಶಿಕ್ಷೆಯನ್ನು ಮಾಡಿದ್ದರೆ ನಾವು ಒಪ್ಪಿಕೊಳ್ಳಬಹುದಿತ್ತು. ಆದರೆ ವಿದ್ಯಾರ್ಥಿಗಳು ಕಾಪಿ ಮಾಡಿದ್ದಾರೆಂದು ಯಾರೋ ಒಬ್ಬರು ಮಾಡಿದ ಶಿಫಾರಸಿನ ಆಧಾರದ ಮೇಲೆ ಪರೀಕ್ಷಾ ಫಲಿತಾಂಶವನ್ನು ತಡೆ ಹಿಡಿದಿರುವುದು ಸರಿಯಲ್ಲ ಆದ್ದರಿಂದ ತಡೆಹಿಡಿದಿರ ತಕ್ಕ ಈ ೭ ಜನ ವಿದ್ಯಾರ್ಥಿಗಳ ಫಲಿತಾಂಶವನ್ನು ಕೂಡಲೇ ಬಿಡುಗಡೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೆ, ನನಗೆ ಮಾಹಿತಿಗೆ ಬಂದಿರುವ ಪ್ರಕಾರ ಹನೂರಿನಲ್ಲಿರುವ ಪರೀಕ್ಷಾ ಕೇಂದ್ರದಲ್ಲಿ ಅವ್ಯವಹಾರವಾಗಿದೆಯೆಂದು ತಿಳಿದುಬಂದಿದೆ. ಕೊಠಡಿಯ ಮೇಲ್ವಿಚಾರಕರ ಸಹಿ ಇಲ್ಲದಿದ್ದರೆ ಅಂಥ ಸಂದರ್ಭದಲ್ಲಿ ಅನುಮಾನ ಬರುತ್ತದೆ. ಇದರಿಂದಾಗಿ ಬಹುಶಃ ಅವ್ಯವಹಾರವಾಗಿರಬಹುದೆಂದು ತಿಳಿದು ಫಲಿತಾಂಶವನ್ನು ತಡೆಹಿಡಿದಿದ್ದಾರೆ. ಆದರೂ ಇದರ ಬಗ್ಗೆ ನಾನಂ ಪೂರ್ಣ ತನಿಖೆ ಮಾಡಿಸುತ್ತೇನೆ. ಮೌಲ್ಯಮಾಪನ ಮಾಡುವವರೂ ಕೂಡ ಉತ್ತರ ಪತ್ರಿಕೆಯಲ್ಲಿ ಏನಾದರೂ ಹಾಳೆಗಳು ಬೇರೆ ಆಗಿದ್ದರೆ (ಬದಲಾಗಿದ್ದರೆ) ಆದನ್ನೂ ಕೂಡ ಅವರು ತಿಳಿಸುವುದಕ್ಕೆ ಅಧಿಕಾರ ಇರುತ್ತದೆ.

ಶ್ರೀ ಜಿ, ರಾಜುಗೌಡ.—ಪರೀಕ್ಷಾ ಕೊಠಡಿಯಲ್ಲಿ ಅವ್ಯವಹಾರ ನಡೆದಿದ್ದರೆ ಅವರನ್ನು ಅಲ್ಲೇ ರೆಡ್ ಹ್ಯಾಂಡ್ ಆಗಿ ಹಿಡಿದು ಅವರನ್ನು ಕಾಲೇಜಿನಿಂದ ಡಿಬಾರ್ ಮಾಡಬಹುದಿತ್ತು. ಆದರೆ ಇಲ್ಲಿ ಆ ರೀತಿ ಏನೂ ನಡೆದಿಲ್ಲ.

ಶ್ರೀ ಜೀವರಾಜ ಆಳ್ವ.—ಪರೀಕ್ಷಾ ಕೊಠಡಿಯಲ್ಲಿ ಅವ್ಯವಹಾರ ನಡೆದಿದೆ, ಕಾಪಿಯಿಂಗ್ ನಡೆದಿದೆ ಎಂದು ತಿಳಿದುಬಂದಾಗ ಮೌಲ್ಯಮಾಪನ ಮಾಡುವಾಗ ಆ ಮ್ಯಾನೇಜ್‌ಮೆಂಟ್‌ನ ಸಹಾಯ ಪಡೆದು ಪಿ.ಯು.ಸಿ. ಮಂಡಲಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಇದು ಹನೂರಿನಲ್ಲಿರತಕ್ಕ ಕಿರಿಯಂ ಕಾಲೇಜು.

ಶ್ರೀ ಜೀವರಾಜ ಆಳ್ವ.—ಅದು ಯಾವುದೇ ಕಾಲೇಜು ಇರಲಿ, ಇದರಲ್ಲಿ ಏನಾದರೂ ತೊಂದರೆ, ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸುತ್ತೇವೆ ಮತ್ತು ಇದರ ವಾಸ್ತವಾಂಶವನ್ನು ತಿಳಿಯುವುದ ಕ್ಕೋಸ್ಕರ ಇದನ್ನು ತನಿಖೆ ಮಾಡಿಸಿ ಫಲಿತಾಂಶವನ್ನು ಬಿಡುಗಡೆ ಮಾಡಿಸುತ್ತೇನೆ.

2) Reg : Hardship caused to the farmers due to collection of land revenue in Yadgir taluk.

SRI MALLIKARJUNA M. KHARGE.—Mr Speaker, Sir, I call the attention of the Minister for Revenue, Planning and Irrigation to the hardship and harassment caused to the poor farmers of Yadgir Taluk, Gulbarga District due to the collection of arrears of land revenue forcibly since 1954 to-date.

SRI S. R. BOMMAI (Minister for Revenue).—Sir, I make the following statement.

A large amount of arrears of various Government dues including land revenue was outstanding since a long time as per the D. C. B. Considering the unsatisfactory position of states finances and to channel funds for the developmental works, the cabinet in its meeting held on 21-11-87 decided that the Revenue Department shall collect 100% of the current demand in addition to 50% of the arrears outstanding as on 31-7-87 by 31-3-88. This decision was taken by the cabinet after a thorough district-wise review of the functioning of the Revenue Department at Bidar, Gulbarga and Bijapur Districts by the Hon'ble Chief Minister.

To keep in line with this decision of the Cabinet, the Revenue Department had assigned targets under each of the five major categories of the Government dues which at the commencement of the revenue year 1987-88 stood outstanding as follows.

		Rs. in crores
1	Land Revenue and cesses	13-58
2	Water rate and Maintenance cess	22-78
3	Penal water rate	30-78
4	Loans	3-11
5	Other dues	16-78
	Total	87-03